ವಸ್ತುವಾಗಬಾರದು. ಅದು ಆನಂದದ ವಸ್ತುವಾಗಬೇಕು. ಹೀಗಾಗಿಯೇ ಬೇಂದ್ರೆಯವರನ್ನು ಒಬ್ಬ ವಿದ್ವಾಂಸನೆನ್ನುವುದಕ್ಕಿಂತ ಒಬ್ಬ ರಸಿಕನೆನ್ನುವುದು ಹೆಚ್ಚು ಸಮರ್ಪಕವೆನ್ನಿಸುತ್ತದೆ.

ಇನ್ನೊಂದು ಪ್ರಸಂಗ, ಒಬ್ಬರ ಮನೆಗೆ ಹೋಗಿದ್ದೆವು. ಸಣ್ಣ ಮಗುವೊಂದು ಬೊಂಬೆಗಳೊಂದಿಗೆ ಆಟವಾಡುತ್ತಿತ್ತು. ಒಂದು ಬೊಂಬೆ ಕೆಳಗೆ ಬಿದ್ದಿತ್ತು. ಮಗು ತನ್ನ ತಾಯಿಯನ್ನು 'ಆ ಮಗುವನ್ನು ಕೊಡು, ಹಾಲನ್ನು ಕುಡಿಸಬೇಕು' ಎಂದು ಕೇಳಿತು. ತಾಯಿ ನಿರ್ಭಾವುಕತೆಯಿಂದ ಅದನ್ನು ಮಗುವಿನತ್ತ ಎಸೆದಳು. ಆಗ ಬೇಂದ್ರೆ 'ನೀವು ಹೀಗೆ ಮಾಡಬಾರದಿತ್ತು, ಆ ಬೊಂಬೆಯನ್ನು ಬೊಂಬೆಯೆಂದು ಕೊಂಡು, ಮಗು ಸೃಷ್ಟಿಸಿದ್ದ ಭಾವಲೋಕವನ್ನು ಹಾಳು ಮಾಡಬಾರದಿತ್ತು. ಆ ಮಗುವಿಗೆ ಬೊಂಬೆಯನ್ನು ಮಗುವಿನಂತೆಯೇ ಎತ್ತಿಕೊಡಬೇಕಿತ್ತು' ಎಂದು ಹೇಳಿದರು. ಕವಿಯಾದರೂ ಮಗುವಿನ ರೀತ್ಯಾ ತನ್ನದೇ ಆದ ಭಾವಲೋಕವನ್ನು ಸೃಷ್ಟಿಸಿ ಕೊಂಡಿರುತ್ತಾನೆ. ರಸಿಕನಾದವನು, ಓದುಗನಾದವನು ಆ ಭಾವಲೋಕವನ್ನು ಪ್ರವೇಶಿಸಿಯೇ ಕವಿಯ ಕವಿತೆಗಳನ್ನು ಆಸ್ವಾದಿಸಬೇಕು. ಅಂತಹ ಭಾವಲೋಕವನ್ನು ನಿರಾಕರಿಸುವ, ಪ್ರಶ್ನಿಸುವ ಕೆಲಸವನ್ನು ಮಾಡಬಾರದು.

ಬೇಂದ್ರೆಯವರ ಬಗ್ಗೆ ಮಾತನಾಡುತ್ತಾ ಹೋದಾಗ ನನಗೆ ಅವರೊಟ್ಟಿಗೆ ಕಳೆದ ಅನೇಕ ಪ್ರಸಂಗಗಳು ಕಣ್ಣ ಮುಂದೆ ಬರುತ್ತವೆ.

ಸಿದ್ಧಾರೂಢರ ಭಕ್ತೆಯೊಬ್ಬಳು ಬೇಂದ್ರೆಯವರ 'ಇನ್ನೂ ಯಾಕ ಬರಲಿಲ್ಲಾವ ಹುಬ್ಬಳ್ಳಿಯಾಂವ' ಕವಿತೆಯನ್ನು ಸಿದ್ಧಾರೂಢರ ಆರತಿ ಪದವೆಂದು ತಿಳಿದುಕೊಂಡು ಆರತಿಯ ಸಂದರ್ಭದಲ್ಲಿ ಹಾಡುತ್ತಿದ್ದರು. ನಾನು ಆಕೆಗೆ ಅದು ಸಿದ್ಧಾರೂಢರ ಆರತಿಯ ಪದವಲ್ಲವೆಂದು, ಅದನ್ನು ಬರೆದವರು ಬೇಂದ್ರೆಯವರೆಂದು ಹೇಳಿದೆ. ಆಕೆಗೆ ನಂಬಿಕೆಯಾಗಲೊಲ್ಲದು. ಬೇಂದ್ರೆಯವರಿಗೆ ಆ ಮಹಿಳೆಯ ಬಗ್ಗೆ ಹೇಳಿದೆ. ಬೇಂದ್ರೆಯವರೂ ನನ್ನೊಡನೆ ಆಕೆಯ ಮನೆಗೆ ಬಂದರು. ಅಚ್ಚರಿಯೆಂಬಂತೆ ಅದು ಸಿದ್ಧಾರೂಢರ ಆರತಿ ಪದವೆಂಬ ಆಕೆಯ ಅಭಿಪ್ರಾಯಕ್ಕೆ ತಮ್ಮ ಅಸಮ್ಮತಿಯನ್ನೇನೂ ಸೂಚಿಸಲಿಲ್ಲ.

ಬೇಂದ್ರೆಯವರ ಪ್ರಕಾರ ಕಾವ್ಯಕ್ಕೆ ನಿರ್ದಿಷ್ಟವಾದ ಅರ್ಥವಿರಬೇಕಾಗಿಲ್ಲ. ಅದು ಬೀಜಗಣಿತದ 'X'ನಂತೆ ಒಂದು ಕಡೆ ಅದರ ಮೌಲ್ಯ '6' ಆಗಬಹುದು, ಮತ್ತೊಂದೆಡೆ ಅದು 'S' ಆಗಬಹುದು. ಓದುಗರ ಯೋಗ್ಯತೆಯ ಪ್ರಕಾರ ಕಾವ್ಯ ಅರ್ಥವಾಗುತ್ತದೆ. ಅವನ ರಸಾಸ್ವಾದನ ಶಕ್ತಿಯಿಂದ, ಅವನ ಹಿನ್ನೆಲೆಯಿಂದ ಕಾವ್ಯ ಅರ್ಥವಾಗುತ್ತದೆ ಎನ್ನುತ್ತಿದ್ದರು. ಕವಿತೆಗೆ ಇದೇ ಅರ್ಥವೆಂದು ಹೇಳಬೇಕಾಗಿಲ್ಲ. ಕವಿತೆ ವಕೀಲನನ್ನು ಅಪೇಕ್ಷೆಪಡುವುದಿಲ್ಲ, ಬದಲಾಗಿ ಒಬ್ಬ ಸಹೃದಯನನ್ನು ಅಪೇಕ್ಷೆ ಪಡುತ್ತದೆ. ಕವಿತೆ ಒಂದು ಚಿತ್ರವನ್ನು ಕಣ್ಣ ಮುಂದೆ ಕಟ್ಟುವಷ್ಟು ಸಶಕ್ತವಾಗಿರಬೇಕು ಎಂಬ ಅಭಿಪ್ರಾಯ ಅವರದು. ಒಂದು ಕುದುರೆಯ ಚಿತ್ರ ಬರೆದು ಅದರ ಕೆಳಗೆ ಇದು ಕುದುರೆ ಎಂದು ಬರೆದರೆ ಅದು ಕಲೆಯ ಸೋಲು. ಹಾಗೆಯೇ ಒಂದು ಕವಿತೆಯ ಅರ್ಥ ತನ್ನಿಂದ ತಾನೇ ಸ್ಫುರಿಸಬೇಕಲ್ಲದೆ, ಅದರ ಅರ್ಥ ಇದು ಎಂದು ಹೇಳಬೇಕಾದರೆ ಅದು ಕವಿಯ ಸೋಲು ಎನ್ನುತ್ತಿದ್ದರು.

ಬೇಂದ್ರೆಯವರು ಒಂದು ರೀತಿಯ ವಿಲಕ್ಷಣ ವ್ಯಕ್ತಿ. ಅಗಾಧ ನೆನಪಿನ ಶಕ್ತಿ ಅವರದ್ದು. ತದ್ವಿರುದ್ಧವಾಗಿ ಕೆಲವೊಮ್ಮೆ ಸಣ್ಣ ವಿಚಾರವನ್ನೂ ಮರೆತುಬಿಡುತ್ತಿದ್ದರು. ಅವರಿಗೆ ಸಾಮಾನ್ಯವಾಗಿ ಒಬ್ಬರೇ ಪ್ರಯಾಣಿಸಲು ಇಷ್ಟವಾಗುತ್ತಿರಲಿಲ್ಲ. ಒಮ್ಮೆ ಎಲ್ಲಿಗೋ ಪ್ರವಾಸ ಹೊರಟಿದ್ದರು. ಮಾರ್ಗಮಧ್ಯದಲ್ಲಿ ನನಗೆ ಭೇಟಿಯಾಗುವಂತೆ ಟೆಲಿಗ್ರಾಮ್‌ನ ಮೂಲಕ